ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 22-08-2023 ರಂದು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ ಕೆ ಆರ್ ಡಿ ನ್ಯಾಯವಾದಿರವರಿಂದಃ

ದಾವಾಸ್ತಿಯ ಪೈಕಿ 2 ನೇ ಜಮೀನನ್ನು ಪ್ರತಿವಾದಿಯರು ಅತಿಕ್ರಮಣ ಮಾಡಿರುತ್ತಾರೆ ಎಂದು ತಾಲೂಕಾ ಸರ್ವೆಯರ್ ರವರು ನೀಡಿದ ಹದ್ದುಬಸ್ತ ನಕಾಶೆ ಪ್ರಕಾರ ಈ ನ್ಯಾಯಾಲಯದಲ್ಲಿ 2 ಆಣೆ ಜಾಗವನ್ನು ಖುಲ್ಲಾ ಮಾಡಲು ಆದೇಶವನ್ನು ಕೇಳುತ್ತಿದ್ದೆನೆ ಎಂದರೆ ಸರಿ . ತಾಲೂಕಾ ಭೂಮಾಪಕರು ನೀಡಿದ ಹದ್ ಬಸ್ತ ನಕಾಶೆಯನ್ನು ನಾನು ಈ ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತೇನೆ. ಸಾಕ್ಷಿಗೆ ತಾನು ಹಾಜರುಪಡಿಸಿದ ದಾಖಲೆಗಳನ್ನು ತೋರಿಸಲಾಗಿ, ಸಾಕ್ಷಿ ಅದನ್ನು ನೋಡಿ ಸದರಿ ದಾಖಲೆಗಳಲ್ಲಿ ಸದರಿ ಹದ್ ಬಸ್ತ ನಕಾಶೆ ಇರುವುದಿಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ. ತಾಲೂಕಾ ಸರ್ವೆಯರ್ ಹದ್ ಬಸ್ತ ಮಾಡುವ ಸಮಯದಲ್ಲಿ ಕೇವಲ ನನಗೆ ಸೇರಿದ ಜಮೀನನ್ನು ಮಾತ್ರ ಅಳತೆ ಮಾಡಿದ್ದು, ಸುತ್ತಮುತ್ತಲಿನ ಜಮೀನಿನ ಅಳತೆ ಮಾಡದೆ ನಕಾಶೆ ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ತಾಲೂಕ ಸರ್ವೆಯರ್ ಕೇವಲ ನನಗೆ ಸೇರಿದ ಜಮೀನನ್ನು ಮಾತ್ರ ಅಳತೆ ಮಾಡಿದ್ದರಿಂದ, ಆ ವಿಷಯ ನ್ಯಾಯಾಲಯಕ್ಕೆ ಗೊತ್ತಾಗುತ್ತದೆ ಎನ್ನುವ ಉದ್ದೇಶದಿಂದ ನಾನು ಸದರಿ ನಕಾಶೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಎ ಡಿ ಎಲ್ ಆರ್ ಕಾರವಾರ ಇವರ ಹದ್ ಬಸ್ತ ಮೇಲ್ಮನವಿ ಪ್ರಕರಣದಲ್ಲಿನ ನಕಾಶೆಯ ಜೆರಾಕ್ಸ ಪ್ರತಿಯನ್ನು ದೃಢಿಕರಿಸಿ ನಿ.ಪಿ-7 ರಂತೆ ಹಾಜರುಪಡಿಸಿರುತ್ತೇವೆ ಎಂದರೆ ಸಾಕ್ಷಿಯು ಸರ್ವೆ ಕಚೇರಿಯಲ್ಲಿ ನೀಡಿದ ದಾಖಲೆಯನ್ನು ನಾನು ಹಾಜರುಪಡಿಸಿರುತ್ತೇನೆ ಎಂದು ಸಾಕ್ಷ್ಯ ನುಡಿಯುತ್ತಾರೆ. ನಿ.ಪಿ-7 ನ್ನು ನಾನು ಕಾನೂನು ಬಾಹಿರವಾಗಿ ಪಡೆದು ಈ ದಾವೆಯಲ್ಲಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಎ ಡಿ ಎಲ್ ಆರ ನ್ಯಾಯಾಲಯದ ಹದಬಸ್ತ ಮೇಲ್ಮನವಿ ಸಂಖ್ಯೆ 5/2016-2017 ರ ವಿರುದ್ಧ ಜಿಲ್ಲಾ ಭೂದಾಖಲೆಗಳ ನಿರ್ದೇಶಕರು ಹಾಗೂ ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಕಾರವಾರ ಇವರ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ದಾಖಲಿಸಿದ್ದು, ಸದರಿ ಮೇಲ್ಮನವಿ ವಿಚಾರಣಾ ಹಂತದಲ್ಲಿ ಇರುತ್ತದೆ ಎಂದರೆ ಸರಿ . ಎ ಡಿ ಎಲ್ ಆರ್ ಕಾರವಾರ ಇವರ ಆದೇಶ ಡಿ ಡಿ ಎಲ್ ಆರ್ ಕಾರವಾರ ಇವರ ಆದೇಶಕ್ಕೆ ಅನುಗುಣವಾಗಿರುತ್ತದೆ ಎಂದರೆ ಸರಿ. ತಾಲೂಕಾ ಸರ್ವೆಯರ್ ತನ್ನ ಹದ್ ಬಸ್ತ ನಕಾಶೆಯಲ್ಲಿ ಕಾಣಿಸಿದ 2 ಆಣೆ ಕ್ಷೇತ್ರವನ್ನು ಎ ಡಿ ಎಲ್ ಆರ ಇವರು ತಿದ್ದುಪಡಿ ಮಾಡಿ ನನಗೆ ಅನುಕೂಲಮಾಡುವ ಉದ್ದೇಶದಿಂದ 1/3 ಅಂಶ ಎಂದು, ಆದೇಶ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಎ ಡಿ ಎಲ್ ಆರ್ ರವರು ಮಾಡಿದ ನಕಾಶೆ ನಿ.ಪಿ-7 ರಲ್ಲಿ ಸರ್ವೆ ನಂ.629 ಕ್ಕೆ ಸಂಬಂದಪಟ್ಟಂತೆ 629/2 ಬಿ1, 2 ಬಿ2 ಹಾಗೂ 2 ಬಿ3 ಹೊರತುಪಡಿಸಿ



ಉಳಿದ ಹಿಸ್ಸೆದಾರರ ಕ್ಷೇತ್ರವನ್ನು ಮೊಜಣಿ ಮಾಡಿದ ಬಗ್ಗೆ ತೋರಿಸಿರುವುದಿಲ್ಲ ಎಂದರೆ ಸರಿ. ಯಾವುದೇ ಮೂಲ ಸರ್ವೆ ನಂಬರ ನಲ್ಲಿ ಆದ ಹಿಸ್ಸಾಗಳನ್ನು ಮೊಜಣಿ ಮಾಡುವ ಸಮಯದಲ್ಲಿ ಸದರಿ ಮೂಲ ಸರ್ವೆ

ನಂಬರನ ಎಲ್ಲಾ ಮಾಲೀಕರಿಗೂ ಮತ್ತು ಹಿಸ್ಸಾದಾರರಿಗೂ ನೋಟೀಸ ಮಾಡಬೇಕಾಗುತ್ತದೆ ಎಂದರೆ ಸರಿ. ಸಾಕ್ಷಿಯು ಸ್ವತಃ ನೋಟೀಸ ಮಾಡಿರುತ್ತಾರೆ ಎಂದು ಸಾಕ್ಷ್ಯ ನುಡಿಯುತ್ತಾರೆ. ಸಾಕ್ಷಿಗೆ ತಾನು ಹಾಜರುಪಡಿಸಿದ ದಾಖಲೆಗಳನ್ನು ತೋರಿಸಲಾಗಿ, ಸದರಿ ಮೂಲ ಸರ್ವೆ ನಂಬರನ ಎಲ್ಲಾ ಮಾಲೀಕರಿಗೂ ಮತ್ತು ಹಿಸ್ಸಾದಾರರಿಗೆ ನೀಡಿದ ನೋಟೀಸನ್ನು ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿಯು ಆ ಬಗ್ಗೆ ನೋಟೀಸನ್ನು ಸರ್ವೆ ಇಲಾಖೆಯವರು ನೀಡಿದ್ದು, ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ. ಸದರಿ ನೋಟೀಸನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿರುವುದಿಲ್ಲ. ನಿ.ಪಿ-7 ರಲ್ಲಿ ಉಳಿದ ಜಮೀನಿನ ಮಾಲೀಕರಿಗೆ ನೋಟೀಸ ನೀಡಿದ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿ. ಸದರಿ ಸರ್ವೆ ನಂ 629 ರಲ್ಲಿ ಬರುವ ಎಲ್ಲಾ ಜಮೀನಿನ ಮಾಲೀಕರಿಗೆ ನೋಟೀಸ ಮಾಡಿ ಜಮೀನನ್ನು ಅಳತೆ ಮಾಡಿದರೆ ಮಾತ್ರ ಅತಿಕ್ರಮಣ ತಿಳಿದುಬರುತ್ತದೆ ಎಂದರೆ ಸರಿ. 1 ನೇ ಪ್ರತಿವಾದಿಯು ನಾನು ಆಧರಿಸುವಂತೆ ಒಂದು ವೇಳೆ ಅತಿಕ್ರಮಣ ಮಾಡಿದ್ದಲ್ಲಿ ಅವರ ಜಮೀನಿನ ಕ್ಷೇತ್ರವು 2 ಗುಂಟೆ 2 ಆಣೆ ಆಗುತ್ತದೆ ಮತ್ತು ಅದನ್ನು ನಿ.ಪಿ-7 ರಲ್ಲಿ ನಮೂದಿಸಿರುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿಗೆ ಈ ಬಗ್ಗೆ ನಿ.ಪಿ-7 ನಕಾಶೆಯನ್ನು ತೋರಿಸಲಾಗಿ ಕೇಳಲಾಗಿದ್ದು, ನನಗೆ ಆ ಬಗ್ಗೆ ಮಾಹಿತಿ ಇರುವುದಿಲ್ಲ, ಸರ್ವೆಯರ್ ಬಂದು ಅಳತೆ ಮಾಡಿರುತ್ತಾರೆ ಎಂದು ಸಾಕ್ಷ್ಯ ನುಡಿಯುತ್ತಾರೆ. ಪ್ರತಿವಾದಿಯರ ಜಮೀನಿನ ನಿಜವಾದ ಕ್ಷೇತ್ರವನ್ನು ಮತ್ತು ಎಲ್ಲಾ ಹಿಸ್ಸಾದಾರರುಗಳ ಜಮೀನುಗಳನ್ನು ಮೊಜಣಿ ಮಾಡದೆ ನಿ.ಪಿ-7 ನಕಾಶೆ ತಯಾರಿಸಿದ್ದು, ಅದು ಕಾನೂನಿನಡಿಯಲ್ಲಿ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯ ಕ್ಷೇತ್ರ 2 ಗುಂಟೆ ಹಾಗೂ ನಾನು ಆಧರಿಸುವಂತೆ ನನ್ನ ಕ್ಷೇತ್ರದಲ್ಲಿ ಅತಿಕ್ರಮಣ ಮಾಡಿದ್ದನ್ನು ಸೇರಿಸಿದರೆ ಒಟ್ಟು 2 ಗುಂಟೆ 2 ಆಣೆ ತೋರಿಸಿದರೆ ಮಾತ್ರ ಅತಿಕ್ರಮಣ ಗೊತ್ತಾಗುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಯಾವತ್ತೂ ಅತಿಕ್ರಮಣ ಮಾಡದೇ ಇದ್ದರೂ ಸಹ ನನಗೆ ಸೇರಿದ 2 ಆಣೆ ಜಮೀನನ್ನು ಅತಿಕ್ರಮಣ ಮಾಡಿರುತ್ತಾರೆ ಎಂದು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಮತ್ತು 1 ನೇ ಪ್ರತಿವಾದಿಯು ತಮ್ಮ ತಮ್ಮ ಜಮೀನುಗಳನ್ನು ಖರೀದಿಸುವ ಕಾಲಕ್ಕೆ 11 ಇ ನಕಾಶೆಯನ್ನು ತಯಾರಿಸಿ ಕ್ರಯ ದಸ್ತಾವೇಜಿನೊಂದಿಗೆ ಲಗತ್ತಿಕರಿಸಿರುತ್ತೇವೆ ಎಂದರೆ ಸಾಕ್ಷಿಯು ನಾನು ಆಸ್ತಿಯನ್ನು ಖರೀದಿಸುವ ಕಾಲಕ್ಕೆ 11 ಇ ನಕಾಶೆ ಇದ್ದಿರಲಿಲ್ಲ ಎಂದು ನುಡಿಯುತ್ತಾರೆ. ನಾನು ಕ್ರಯ ದಸ್ತಾವೇಜಿನೊಂದಿಗೆ ಹಾಜರುಪಡಿಸಿದ 11 ಇ ನಕಾಶೆಯನ್ನು ಈ ದಾವೆಯಲ್ಲಿ ಹಾಜರುಮಾಡಿದ್ದರೂ ಸಹಿತ 11 ಇ ನಕಾಶೆ ಇಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ನಿ.ಡಿ-1



ತೋರಿಸಲಾಗಿದ್ದು, ಸದರಿ ನಿ.ಡಿ-1 ಕ್ಕೆ ಲಗತ್ತಿಸಿದ ನಕಾಶೆಯು 11 ಇ ನಕಾಶೆಯಾಗಿರುತ್ತದೆ ಎಂದರೆ ಸಾಕ್ಷಿಯು ಅದು ಪಿಟಿ ಶೀಟ್ ನ ಆಧಾರದ ಮೇಲೆತೋರಿಸಿದ ನಕಾಶೆಯಾಗಿರುತ್ತದೆ ಎಂದು ಸಾಕ್ಷ್ಯ ನುಡಿಯುತ್ತಾರೆ. ನಿ.ಡಿ-1 ಕ್ರಯದಸ್ತಿನೊಂದಿಗೆ ಲಗತ್ತಿಸಿದ 11 ಇ ನಕಾಶೆ ಹಾಗೂ ಪ್ರತಿವಾದಿಯು ತನ್ನ ಖರೀದಿ ಪತ್ರದ ಸಮಯದಲ್ಲಿ ಮಾಡಿದ 11 ಇ ನಕಾಶೆಯ ಆಧಾರದಂತೆ ತಾಲೂಕಾ ಸರ್ವೆಯರ್ ಇಮರ ಹದಬಸ್ತ ಮತ್ತು ಎ ಡಿ ಎಲ್ ಆರ್ ಇವರು ನಿ.ಪಿ-7 ತಯಾರಿಸಿರುವುದಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿಯವರು ಮುನಿಸಿಪಾಲಿಟಿ ಕಮೀಷನರ್ ಮತ್ತು ಅಭಿಯಂತರರ ವಿರುದ್ಧ ಮಾನ್ಯ ಲೋಕಾಯುಕ್ತ ಬೆಂಗಳೂರು ಇವರಿಗೆ ದೂರನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ದೂರಿನ ಆಧಾರದಂತೆ ಆಯುಕ್ತರು ಹಾಗೂ ಅಭಿಯಂತರರು ನಗರಸಭೆ ಕಾರವಾರ ಇವರ ವೇತನದಲ್ಲಿ ಇನಕ್ರಿಮೆಂಟ್ ಕಡಿತಗೊಳಿಸುವಂತೆ ಆದೇಶ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಹಾಗೆ ಆದೇಶವಾದ ಸಮಯದಲ್ಲಿ ಆಯುಕ್ತರು ಮತ್ತು ಅಭಿಯಂತರರು ನಾನು ಕಟ್ಟಡ ಪರವಾನಿಗೆ ನಿಯಮಗಳನ್ನು ಉಲ್ಲಂಘಿಸಿ ನಿರ್ಮಾಣ ಮಾಡಿದ ಕಟ್ಟಡವನ್ನು ತೆರವುಗೊಳಿಸುತ್ತೇವೆ ಎಂದು ಮಾನ್ಯ ಲೋಕಾಯುಕ್ತ ಇವರಲ್ಲಿ ಮುಚ್ಚಳಿಕೆ ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಿಃ 04-07-2015 ರಂದು ಪ್ರಾಥಮಿಕ ಆದೇಶ ಮಾಡಿ , ದಿಃ 07-11-2015 ರಂದು ಪಂಚರ ಸಮಕ್ಷಮ ಅತಿಕ್ರಮಣವನ್ನು ತೆರವು ಗೊಳಿಸಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲದ ರೀತಿಯಲ್ಲಿ ಅಕ್ರಮವಾಗಿ ತೆರವು ಮಾಡಿದ್ದು, ಅದಕ್ಕಾಗಿಯೇ ಕಾರವಾರ ನಗರಸಭೆ ಇವರನ್ನು ಪಕ್ಷಗಾರರನ್ನಾಗಿ ಮಾಡಿರುತ್ತೇನೆ ಎಂದು ಸಾಕ್ಷ್ಯ ನುಡಿಯುತ್ತಾರೆ. ನಾನು ಕಾನೂನು ಬಾಹಿರ ಕಟ್ಟಡಕಟ್ಟಿರುವುದರಿಂದ ನಗರಸಭೆಯವರು ನಮ್ಮ ವಿರುದ್ಧ ಕ್ರಮಕೈಗೊಂಡಿದ್ದು, ಅದಕ್ಕೆ ಪ್ರತಿವಾದಿಯರು ಕಾರಣವಾಗಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ತಪ್ಪಿನಿಂದಲೇ ನಮ್ಮ ಕಟ್ಟಡವನ್ನು ನಗರಸಭೆಯವರು ತೆರವು ಗೊಳಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ನಾವು ಯಾವುದೇ ಅತಿಕ್ರಮಣ ಮಾಡಿರುವುದಿಲ್ಲ, ಸೇಟ್ ಬ್ಯಾಕ್ ಕಡಿಮೆ ಬಿಟ್ಟಿದ್ದು, ಆ ಉದ್ದೇಶದಿಂದಾಗಿಯೇ ಪ್ರತಿವಾದಿಯೊಂದಿಗೆ ಕೂಡಿಕೊಂಡು ನಗರಸಭೆಯವರು ಅಕ್ರಮವಾಗಿ ನನ್ನ ಕಟ್ಟಡದ ಒಂದು ಅಂಶವನ್ನು ತೆರವುಗೊಳಿಸಿದ್ದಾರೆ ಎಂದು ಸಾಕ್ಷ್ಯ ನುಡಿಯುತ್ತಾರೆ. ನಗರಸಭೆಯವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಹಾಗೂ ಅವರ ವಿರುದ್ಧ ಯಾವುದೇ ಆದೇಶವನ್ನು ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ನಗರಸಭೆಯವರನ್ನು ಪಕ್ಷಗಾರರನ್ನಾಗಿ ಮಾಡಿರುತ್ತೇವೆ ಎಂದು, ಹಾಗೂ ಅವರ ವಿರುದ್ಧ ಆದೇಶ ಕೇಳಿರುತ್ತೇವೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ-7 ಮತ್ತು 8 ನಕಾಶೆಗಳನ್ನು ಖಾಯಂ ರಣಕಲ್ಲುಗಳ ಆಧಾರದ ಮೇಲೆ ತಯಾರಿಸದೇ ಖೈವಾಟಿ ರಣಕಲ್ಲುಗಳನ್ನು ಸೃಷ್ಟಿಸಿ ಸಂಬಂಡಪಟ್ಟ



ಮೋಜಣಿದಾರರು ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ಕಾನೂನು ಬಾಹಿರ ನಕಾಶೆ ಆಧಾರದ ಮೇಲೆ ಹಕ್ಕನ್ನು ಪ್ರತಿಪಾದಿಸುತ್ತಿದ್ದು, ಕಾನೂನು ಪ್ರಕಾರ ಈ ದಾವೆ ನಿಲ್ಲತಕ್ಕದಲ್ಲ ಎಂದರೆ ಸರಿಯಲ್ಲ. ನಗರಸಭೆಯವರು ನಮ್ಮ ಕಟ್ಟಡದ ಗೋಡೆಯನ್ನು ತೆರವು ಮಾಡಿದರ ಪರಿಣಾಮ ದ್ವೇಷ ಸಾಧನೆಗಾಗಿ ಈ ಸುಳ್ಳು ದಾವೆಯಲ್ಲಿ ಸಲ್ಲಿಸಿರುತ್ತೇನೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ,**

ಸಹಿ ಇದೆ .

ಸಿವಿಲ್ ನ್ಯಾಯಾಧೀಶರು ಕಾರವಾರ